7. ಯಾವ ದರಖಾಸ್ತು ಮಂಜೂರ್ಮಾಡಲ್ಪಡುವದೋ ಅಂಥಾ ದರಖಾಸ್ತುದಾರನ ಹೆಸರನ್ನು ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸ್ ನೋಟಿಸ್ ಬೋರ್ಡಿನಲ್ಲಿ ಐಯಿಂದ ಚಿಕಟಾಯಿಸಲ್ಪಡುವದು.

8. ದರಖಾಸ್ತುಗಳ ವೈಕಿ ಬಂದು ದರಖಾಸ್ತು ಮಂಜೂರಾದ ಕೂಡ್ಲೆ ಅನಂಗೀಕಾರವಾದ ದರಖಾಸ್ತುಗಳ ಡಿಪಾಜಿಟ್ ಹಣವು ವಾಪಸ್ ಮಾಡಲ್ಪಡುವದು.

ಬಾಬುವಾರು.	ಅಂದಾಜಿಗೆ.	ದರ.	ಪರಿಮಾಣ.	ಗಾ ಗ್ರಾ
ಪಾಯಖೋದೀ ಕೆಲಸ	ಸಲೆಗಜ		906	
ಕಲ್ಲು ಸುಂಣದಿಂದ ಪಾಯಾಭರ್ತಿ ಜೇಸ್ ಮಟ್ಟ	ಸಲೆಅಡಿ		16290	
ಇಟ್ಟಿಗೆ ಸುಂಣದಿಂದ ಗೋಡೆ	ಡಿಟೋ		26608	
ಡಿಟೋ ಕವಾ೯ ಕೆಲಸ	ಡಿಟೋ		2430	
ಸದರೀ	ಡಿಟೋ		513	
ಸುಂಣದಿಂದ ಗಿಲಾವು	ಚದರ.		469·84	
ಸುಂಣದಿಂದ ನಂದುಗಾರೆ	ಡಿಟೋ		17·10	
ಸುಂಣ ಬಳೆಯುವದು	ಡಿಟೋ		196·90	
ಬಂಣ ಬಳೆಯುವದು	ಡಿಟೋ		272·94	
ಕಾರ್ನೀಸ್ (ವಂದೂವರೆ ಅಡಿ ಹೊರಡಿಸುವದು)	ಲಾಂಬಿ ಅಡಿ		810	
ಡಿಟೋ (ವಂದು ಅಡಿ ಡಿಟೋ) ..	ಡಿಟೋ		320	
ಕಂಭಗಳ ತಲೆಸುತ್ತು ಕಾರ್ನೀಸ್	ಡಿಟೋ		208	
ಜನಲು ಸುತ್ತು ತೆರಣಿ	ಡಿಟೋ		10·44	
ಪಜ್ಜಗಾರೆ	ಚದರ ಅಡಿ		84·54	
ತಾರಸು	ಡಿಟೋ		217·74	
ತ್ಯಾಗದ ಮರದ ಕೆಲಸ	ಸಲೆಅಡಿ		2062	
ಮೆಟ್ಟು ಚಪ್ಪಡಿ	ಚದರಡಿ		128	
ಕದಗಳು	ಡಿಟೋ		832	
ಜನಲುಗಳು—	ಡಿಟೋ		1120	
ಮೇಲೆ ಚಿಕ್ಕ ಜನಲುಗಳು	ಡಿಟೋ		336	
ಕನ್ನಡಿ ಅರ್ಧ ಕವಾ೯ ಜನಲುಗಳು	ಡಿಟೋ		416	
ಬಿದರ ಬಾಪೆ ಬೆನ್ನು ಬೆಪ್ಪೆಯಿಂದ ಮಾಡಿದ್ದು	ಡಿಟೋ		71·13	
ಮರದೆಂಚಿ ಕೆಲಸ				
ಜಿಂಕ್ ಕೊಳಾಯಿಗಳು				

ಟಿ. ಆರ್. ಸ್ಕಾಲ್ಡ್‌ವೆಲ್,
ಎಗ್ಜಿಕ್ಯೂಟಿವ್ ಇಂಜನಿಯರ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 9ನೇ ಡಿಸಂಬರ್ 1889.

ಗೋಲ್ಡ್‌ಮೈ೯ಯಾನೆ ಭಂಗಾರ ಗಣಿಗಳಿಗೆ ಸಾದೆ ಬಗ್ಗೇ.

ಇದರಿಂದ ತಿಳಿಯಪಡಿಸುವದೇನಂದರೆ—ಕೋಲಾರ ಡಿಸ್ಟ್ರಿಕ್ಟು ಬನ್ವೆರಿಂಗ್‌ಪ್ಯಾಟೆ ಮತ್ತು ಮೊಲೂರು ತಾಲ್ಲೂಕುಗಳಿಗೆ ಕೀರಿದ ಈ ಮಸಂದ್ರದ ಜಂಗಲ್ ವೈಕಿ ಈ ಕೆಳಗೆ ವಿವರಿಸಲ್ಪಟ್ಟಿರುವ 3 ಮತ್ತು 4ನೇ ನಂಬರು ಬ್ಲಾಕುಗಳಲ್ಲಿ ಬಂದು ಅಥವಾ ಎರಡು ವರುಷಗಳ ವರಿಗೆ ಸವ್ವೆದೆ ಕಡದುಕೊಳ್ಳುವ ಹಕ್ಕನ್ನು ಅಪೇಕ್ಷಿಸತಕ್ಕವರಿಂದ ಪ್ರತಿ ಬಂದು ಬ್ಲಾಕಿಗೂ ದೇರೆದೇರೆ ಬರುವ ಮೊಹರ್ ಮಾಡಿದ ದರ ಖಾಸ್ತುಗಳನ್ನು ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರು 1890ನೇ ಇಸವಿ ಜನವರಿ 22ನೇ ತಾರೀಖಿನವರಿಗೆ ತೆಗದುಕೊಳ್ಳುವರು.—

2. ಈ ಪ್ರತಿ ಬಂದು ಬ್ಲಾಕಿನಿಂದ ಸಂಣ ಸಂಣ ತುಂಡುಗಳಾಗಿ ಕೊಯಿದು ಪೇರಿಸಿದ 68 ಸಲೆ ಅಡಿಗಳುಳ್ಳ ಟ್ರ ಬಂದಕ್ಕೆ ಆಯಾ ದರಖಾಸ್ತುದಾರರು ಕೊಡಲು ಒಪ್ಪುವ ಸೀನಿಯರೇಜ್ ತೀರ್ವೆಯ ಹೆಚ್ಚು ದರವನ್ನು ಅವರವರ ದರಖಾಸ್ತಿನಲ್ಲಿ ನಮೂದಿಸಿ ಇ ರಬೇಕು. ನಗದು ಅಥವಾ ನೋಟು ಮೂಲಕ (300) ರೂಪಾಯಿಗಳ ಡಿಪಾಜಿಟ್ ವೊಬಲಿಗಿನ ಸಮೇತ ಬಾರದೆ ಇರುವ ದರಖಾಸ್ತುಗಳು ತೆಗದುಕೊಳ್ಳಲ್ಪಡುವದಿಲ್ಲ.

3. ಈ ಬ್ಲಾಕಿನಲ್ಲಿ ಯಾವ ಪ್ರದೇಶದಲ್ಲಿ ಮರ ಕಡಿಯತಕ್ಕದ್ದೋ ಅದನ್ನು ಕಡಿಯತಕ್ಕ ಮರಗಳನ್ನು ಸಹ ಫಾರೆಸ್ಟ್ ಇಲಾಖೆಯವರು ಗುರ್ತು ಮಾಡುತ್ತಾರೆ. ಹಾಗೆ ಗುರ್ತು ಮಾಡಲ್ಪಟ್ಟ ಮರಗಳನ್ನು ಮಾತ್ರಾ ಕಂಟ್ರಾಕ್ಟುದಾರನು ಫಾರೆಸ್ಟ್ ಇಲಾಖೆಯವರು ನೇಮಿಸುವ ರೀತಿಯಲ್ಲಿ ಕಡದುಕೊಳ್ಳುವದಕ್ಕೆ ಬದ್ಧನಾಗಿ ಮುಚ್ಚಳಿಕೆ ಬರದುಕೊಡಬೇಕು, ಈ ಷರತ್ತುಗಳಿಗೆ ತಪ್ಪಿದರೆ ಸರಕಾರದವರು ಗೊತ್ತು ಮಾಡುವ ಜುರ್ಮಾನೆ ತೆರಲಿಕ್ಕೆ ಗುರಿಯಾಗಿರುವದಾಗಿ ಸದರೀ ಮುಚ್ಚಳಿಕೆಯಲ್ಲಿ ನಮೂದಿಸಬೇಕು. ಬೆಳಸಿಕೊಳ್ಳಲ್ಪಟ್ಟು ಇರುವ ಜಾತಿ ಮರಗಳನ್ನು ಫಲವೈಕ್ಷಗಳನ್ನು ಅಥವಾ ಇತರ ಜೆನಸಿ ಜುಟ್ಟುವಳೆಯಾಗತಕ್ಕ ಮರಗಳನ್ನು ಸ್ಟ್ಯಾಂಡರ್ಡ್ ಯಂಬದಾಗಿ ಬೆಳಸಿಕೊಳ್ಳಲ್ಪಡುವ ಮರಗಳನ್ನು ಕಡಿದುಕೊಡದು ಮತ್ತು ಅವುಗಳ ರೆಂಬೆಗಳನ್ನು ಸವರಲೂ ಕೂಡದು.

4. ಕಂಟ್ರಾಕ್ಟುದಾರರು ತಮ್ಮ ತಮ್ಮ ಬ್ಲಾಕಿನ ಪೈಕಿ ಡಿಮಾರ್ಕೇರ್ಷ ಲೈನಿನಲ್ಲಿರತಕ್ಕ ಮರಗಳನ್ನು ಕಡಿಯಲು ಬದ್ಧರಾಗಿರತಕ್ಕದ್ದು.

5. ಈ ವಿಷಯದಲ್ಲಿ ಮೇಲೆ ನಮೂದಾಗುವದಕ್ಕಿಂತ ಹೆಚ್ಚು ತಪಶೀಲಿಗಳು ತಿಳಿಯಬೇಕಾಗಿ ಯಿದ್ದಲ್ಲಿ ಅವುಗಳನ್ನು ಕಂಟ್ರಾಕ್ಟಿನ ಷರತ್ತುಗಳನ್ನು ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹಬರವರ ಆಫಿಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

6. ಮೊಹರ್ಯಾಡಿದ ದರಖಾಸ್ತುಗಳನ್ನು ಸ್ರ್ 1890ನೇ ಇಸವಿ ಜನವರಿ 22ನೇ ತಾರೀಖು ಮಧ್ಯಾನ್ಹ 12 ಘಂಟೆಗೆ ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಆಫಿಸಿನಲ್ಲಿ ಡೆಪ್ಯುಟಿ ಕಮ್ಮಿಷನ್ನರವರಾಗಲಿ ಅಥವಾ ಅವರು ನೇಮಿಸುವ ಇತರ ಆಫಿಸರರಾಗಲಿ ಆಗ್ಯೆ ಹಾಜರಿರುವ ದರಖಾಸ್ತುದಾರರ ಸಮಕ್ಷಮ ವೇಡದು ನೋಡುವರು.

7. ಡಿಪ್ಯುಟಿ ಕಮ್ಮಿಷನರವರು ಕಾರಣ ನಮೂದಿಸದೆ ಯಾವ ದರಖಾಸ್ತನ್ನಾದರೂ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ತಮ್ಮಲ್ಲಿ ಬೆಳಸಿಕೊಂಡು ಯಿದ್ದಾರೆ.

8. ಯಾವ ಮನುಷ್ಯನ ದರಖಾಸ್ತು ಅಂಗೀಕರಿಸಲ್ಪಡುವದೋ ಅವನ ಡಿಪಾಜಿಟ್ ಮೊಬಲಗು ನಿಲ್ಲಿಸಿಕೊಳ್ಳಲ್ಪಡುವದು, ಅಂಥಾ ದರಖಾಸ್ತುದಾರನ ದರಖಾಸ್ತು ಮಂಜೂರಾದ ಸಂಗತಿ ಅವನಿಗೆ ತಿಳಿಸಲ್ಪಟ್ಟ (10) ದಿವಸಗಳ ಒಳಗಾಗಿ ಸರಿಯಾದ ಸ್ಟ್ಯಾಂಪು ಕಾಗದದಲ್ಲಿ ಸದರೀಯವನು ಅವಶ್ಯಕವಾದ ಮುಚ್ಚಳಿಕೆ ಬರದುಕೊಡಬೇಕು, ಮತ್ತು ಕಂಟ್ರಾಕ್ಟು ಷರತ್ತುಗಳ ಪ್ರಕಾರ ಕ್ರಮವಾಗಿ ನಡದುಕೊಳ್ಳಲು ಜಾಮೀನ್ ತರ್ಕ ನಗದು 500 ರೂಪಾಯಿ ಠೇವಣಿ ಯಿಡಬೇಕು, ಇದಕ್ಕೆ ತಪ್ಪಿದರೆ ಅವನ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

9. ದರಖಾಸ್ತುದಾರರು ತಾವು ಕೆಳುಹಿಸುವ ದರಖಾಸ್ತುಗಳ ಮೇಲೆ "ಕಾಮಸಂದ್ರದ ಜಂಗಲ್ ಪೈಕಿ (ಸಂದರ್ಭಾನುಸಾರ) 3 ಅಥವಾ 4ನೇ ಬ್ಲಾಕಿನಿಂದ ಸಾವೆ ಕಡದು ತರುವ ಹಕ್ಕಿಗೋಸ್ಕರ ಕಳುಹಿಸಲ್ಪಟ್ಟ ದರಖಾಸ್ತು" ಯಿಂದು ಬರಿಯಬೇಕು.

3ನೇ ನಂಬರು ಬ್ಲಾಕಿನ ವಿವರಣೆ:—(ತಮಟಮಾಕನಹಳ್ಳಿ ಮೂತನೂರು ಜಂಗಲ್.)

ಚಕ್ಕುಬಂದಿ.

ಪೂರ್ವಕ್ಕೆ—ತಮಟಮಾಕನಹಳ್ಳಿ ಮತ್ತು ಭೀಮಗಾನಹಳ್ಳಿ.

ಪಶ್ಚಿಮಕ್ಕೆ—ಮಲಗಲಹಕಿ ಯಿಂದ ಬೂದೀಕೋಟೆಗೆ ಹೋಗುವ ಛಂಡಿಜಾಡು.

ಉತ್ತರಕ್ಕೆ—ವಲಮಡಗು ದಿನ್ನೂರು ಪಾತರಾಮಗೊಳ್ಳು ಮತ್ತು ಕಾಮಸಂದ್ರದ ಜಂಗಲ್ ಡಿವಾರ್ಕೇರ್ಷ ಲೈನ್.

ದಕ್ಷಿಣಕ್ಕೆ—ಹರಿವಾಜೆಸ್ಟ್ರಿಸ್ ಠೇಮೆಯ ಸೇಲಂ ಡಿಸ್ಟ್ರಿಕ್ಟಿಗೂ ಮೈಸೂರು ಠೇಮೆಗೂ ಸರಹದ್ದು ಗ್ರಾಮಗಳಾದ ಬರಿಮಡಗೂ ಮತ್ತು ಮಲಗಲಹಕ್ಕಿ ಯಿವುಗಳ ಈಚೆ ಇರತಕ್ಕ ಕಾಮಸಂದ್ರದ ಜಂಗಲ್ ಡಿವಾರ್ಕೇರ್ಷ ಲೈನ್.

4ನೇ ನಂಬರ್ ಬ್ಲಾಕಿನ ವಿವರಣೆ—(ಮ್ಯೋಕಲನಾಯಕನ ಪಾಳ್ಯದ ಬೆಟ್ಟದ ಜಂಗಲ್.)

ಚಕ್ಕುಬಂದಿ.

ಪೂರ್ವಕ್ಕೆ—ಮಲಗಲಹಕ್ಕಿ ಯಿಂದ ಬೂದೀಕೋಟೆಗೆ ಹೋಗುವ ಛಂಡಿಜಾಡು.

ಪಶ್ಚಿಮಕ್ಕೆ—ಮೂಲೂರು ತಾಲ್ಲೂಕು ಕೋಡಹಳ್ಳಿ, ಕೊತ್ತೂರು ಗೆಂನಹಳ್ಳಿ, ಮ್ಯೋಕಲನಾಯಕನ ಪಾಳ್ಯ ಮತ್ತು ಬೈರಾಗಿಮಠ ಈ ಗ್ರಾಮಗಳಿಗೆ ಪೂರ್ವ ದಿಕ್ಕಿನಲ್ಲಿರುವ ಕಾಮಸಂದ್ರ ಜಂಗಲ್ ಡಿವಾರ್ಕೇರ್ಷ ಲೈನ್.

ಉತ್ತರಕ್ಕೆ—ಬವುರಿಂಗ್‌ಪೇಟೆ ತಾಲ್ಲೂಕು ಪಾತರಾಮಗೊಳ್ಳು ಮತ್ತು ಮೂಲೂರು ತಾಲ್ಲೂಕು ಗೊಡಗಹಳ್ಳಿ ಈ ಗ್ರಾಮಗಳ ಸರಹದ್ದಿನಲ್ಲಿರುವ ಕಾಮಸಂದ್ರ ಜಂಗಲ್ ಡಿವಾರ್ಕೇರ್ಷ ಲೈನ್.

ದಕ್ಷಿಣಕ್ಕೆ—ಸೇಲಂ ಡಿಸ್ಟ್ರಿಕ್ಟು ಮಲಗಲಹಕ್ಕಿ ಮತ್ತು ಚೆನ್ನಾರದೊಡ್ಡಿ ಈ ಗ್ರಾಮಗಳ ಸರಹದ್ದಿನಲ್ಲಿ ಯಿರುವ ಕಾಮಸಂದ್ರ ಜಂಗಲ್ ಡಿವಾರ್ಕೇರ್ಷ ಲೈನ್